ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	33
ಸದಸ್ಯರ ಹೆಸರು	:	ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	09.07.2018.
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ)

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ದಿನಾಂಕ: 08.01.2018 ರಂದು ಬೈಂದೂರಿನಲ್ಲಿ ಹಿಂದಿನ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ಮಾಡಿದ ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವರಾಹಿ ನೀರಾವರಿ ಯೋಜನೆಯ ಏತ ನೀರಾವರಿ ಯೋಜನೆಗೆ ತಗಲುವ ಅಂದಾಜು ಮೊತ್ತವೆಷ್ಟು; ಮತ್ತು ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;	ದಿನಾಂಕ:08.01.2018ರಂದು ಬೈಂದೂರಿನಲ್ಲಿ ಹಿಂದಿನ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ ಇವರಿಂದ ಶಂಕುಸ್ಥಾಪನೆ ಮಾಡಿ ನಿರ್ವಹಿಸಲ್ಪಡುತ್ತಿರುವ ವಾರಾಹಿ ಏತ ನೀರಾವರಿ ಯೋಜನೆಯ ಅಂದಾಜು ಮೊತ್ತ ರೂ.35000.00 ಲಕ್ಷಗಳಾಗಿರುತ್ತದೆ. ಸದರಿ ಯೋಜನಾ ಕಾಮಗಾರಿಗೆ ಟರ್ನಕೀ ಆಧಾರದ ಮೇಲೆ ದಿನಾಂಕ:08.06.2018ರಂದು ಟೆಂಡರ್‌ನ್ನು ವಹಿಸಲಾಗಿದ್ದು, ಟೆಂಡರ್ ಅವಧಿಯು 18ತಿಂಗಳು (ಮಳೆಗಾಲ ಹೊರತುಪಡಿಸಿ) ಟೆಂಡರ್ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಜರುಗಿಸಲಾಗುವುದು.
ಆ)	ವರಾಹಿ ನೀರಾವರಿ ಯೋಜನೆಯ ಏತ ನೀರಾವರಿ ಯೋಜನೆಯಿಂದ ಯಾವ ಯಾವ ಗ್ರಾಮಗಳ ರೈತರಿಗೆ ಎಷ್ಟು ಎಕರೆ ಕೃಷಿ ಭೂಮಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು; (ಗ್ರಾಮವಾರು ವಿವರ ನೀಡುವುದು);	ಮೂಲ ಯೋಜನಾ ವರದಿಯಂತೆ, ವಾರಾಹಿ ಏತ ನೀರಾವರಿ ಯೋಜನಾ ಕಾಮಗಾರಿಗಳ ಮೂಲಕ ಉಡುಪಿ ತಾಲ್ಲೂಕಿನ 28-ಹಾಲಾಡಿ, ಆವರ್ಸೆ, ವಂಡಾರು, ಶಿರಿಯಾರ ಮತ್ತು ಶಿರಿಯಾರ-21, ಹೆಗ್ಗುಂಜೆ, ಬಿಲ್ಲಾಡಿ, ಯಡ್ತಾಡಿ ಮತ್ತು ಯಡ್ತಾಡಿ-22, ಕಾವಾಡಿ-18, ಅಚ್ಲಾಡಿ-20, ಶಿರೂರು, ಕಾಡೂರು, ನಾಡೂರು ಗ್ರಾಮಗಳ ಸುಮಾರು 2723ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದ್ದು, **(ಗ್ರಾಮವಾರು ಅಚ್ಚುಕಟ್ಟು ವಿವರ ಪ್ರತ್ಯೇಕವಾಗಿ ಅನುಬಂಧದಲ್ಲಿ ಲಗತ್ತಿಸಲಾಗಿದೆ)** ಸದರಿ ಏತ ನೀರಾವರಿ ಕಾಮಗಾರಿಯ ಸರ್ವೆ ಕಾಮಗಾರಿ ಪ್ರಗತಿಯಲ್ಲಿದ್ದು, ಸರ್ವೆ ಕಾಮಗಾರಿ ಪೂರ್ಣಗೊಂಡ ಬಳಿಕ ನೀರಾವರಿಗೆ ಒಳಪಡುವ ಗ್ರಾಮವಾರು ಕ್ಷೇತ್ರದ ವಿವರಗಳನ್ನು ದೃಢೀಕರಿಸಬಹುದಾಗಿರುತ್ತದೆ.
ಇ)	38 ವರ್ಷಗಳ ಹಿಂದೆ ಶಂಕುಸ್ಥಾಪನೆಯಾಗಿರುವ ವರಾಹಿ ನೀರಾವರಿ ಯೋಜನೆಯ ಬಲದಂಡೆ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ಇಲ್ಲಿಯ ತನಕ ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ಬಲದಂಡೆ ಯೋಜನೆಯ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆ ನಡೆಯದೆ ಇಲ್ಲಿಯವರೆಗೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ತುರ್ತು ಕ್ರಮಗಳೇನು;	38 ವರ್ಷಗಳ ಹಿಂದೆ ಶಂಕುಸ್ಥಾಪನೆಯಾಗಿರುವ ವಾರಾಹಿ ನೀರಾವರಿ ಯೋಜನೆಯಡಿ, ಬಲದಂಡೆ ಯೋಜನೆಗೆ ಸಂಬಂಧಿಸಿದಂತೆ, ಹಂತ ಹಂತವಾಗಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಬಲದಂಡೆ ಯೋಜನೆಯಡಿ ಬರುವ ಹೊಸಂಗಡಿ, ಸಿದ್ಧಾಪುರ, ಉಳ್ಳೂರು-74, ಶಂಕರನಾರಾಯಣ ಮತ್ತು ಕುಳ್ಳುಂಜೆ ಗ್ರಾಮಗಳಲ್ಲಿ ಹಾದುಹೋಗುವ ವಾರಾಹಿ ಬಲದಂಡೆ ಸಾಮಾನ್ಯ ನಾಲಾ ಸರಪಳಿ 0.00 ರಿಂದ 18.725 ಕಿ.ಮೀ ಕಾಮಗಾರಿಗಳ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ ಹಾಗೂ ವಾರಾಹಿ ಬಲದಂಡೆ ನಾಲಾ ಕಾಲುವೆಯು ಬಹುತೇಕವಾಗಿ ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿದ್ದು, ಅರಣ್ಯ ಪ್ರದೇಶದ ತೀರುವಳಿ ಪಡೆದ ನಂತರ ಕಾಲುವೆ ನಿರ್ಮಾಣ ಸರಪಳಿ 18.725 ರಿಂದ 42.73 ಕಿ.ಮೀವರೆಗಿನ ಕಾಮಗಾರಿಗಳ ಭೂಸ್ವಾಧೀನ ಪ್ರಸ್ತಾವನೆಯನ್ನು ಹೊಸ ಭೂಸ್ವಾಧೀನ ಕಾಯ್ದೆಯನ್ವಯ ಹಂತ-ಹಂತವಾಗಿ – ಕೈಗೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದು.
ಈ)	ವರಾಹಿ ನೀರಾವರಿ ಯೋಜನೆಯಲ್ಲಿ ವಿವಿಧ ದರ್ಜೆಯ ಅಭಿಯಂತರರುಗಳ ಕೊರತೆಯಿಂದ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಪೂರ್ಣಗೊಳ್ಳಲು ತೊಡಕಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ವಾರಾಹಿ ನೀರಾವರಿ ಯೋಜನೆಯಡಿ, ಮಂಜೂರಾದ ವಿವಿಧ ದರ್ಜೆಯ ಅಭಿಯಂತರರುಗಳ ಹುದ್ದೆಗಳಿಗೆ ಹೋಲಿಸಿದಲ್ಲಿ, ಕಾರ್ಯನಿರ್ವಹಿಸುತ್ತಿರುವ ಅಭಿಯಂತರರುಗಳ ಸಂಖ್ಯೆ ಕಡಿಮೆಯಿದ್ದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಜಸಂಇ 30 ಎಂಎಲ್ಎ 2018

[ಡಿ.ಕೆ.ಶಿವಕುಮಾರ್]
ಜಲಸಂಪನ್ಮೂಲ ಸಚಿವರು.

ಅನುಬಂಧ

Atchkut Details of Varahi Lift Canal

Sl. No.	Outlet no.	off take point in km	Village	Area (in ha)	Block No.
1	2	3	4	5	6
1	DO-1	1.90	28-Haladi	16.95	1
2	Dy-1	3.45	28-Haladi	66.00	2
3	Dy-2	4.15	28-Haladi & Avarse	139.57	3
4	Dy-3	5.10	Avarse & Haladi	42.33	4
5	Dy-4	6.00	Avarse & 28-Haladi	76.18	5
6	DO-2	7.115	Avarse	32.71	6
7	Dy-5	8.10	Avarse & Vandaru	71.80	7
8	Dy-6	11.055	Vandaru & Shiriyara	48.18	8
9	Dy-7 & DO-3	13.58	Vandaru, Heggunje & Billadi	73.73	9 & 10
10	Dy-8	14.33	Billadi	72.69	11
11	Dy-9	15.455	Heggunje	57.08	12
12	Dy-10	16.43	Billadi	49.07	13
13	Dy-11	17.14	Billadi	57.47	14
14	Dy-12	17.18	Billadi & Heggunje	68.87	15
15	Dy-13	17.805	Yedtadi & Heggunje	69.51	16
16	Dy-14	18.73	Yadtadi	99.52	17
17	DO-4	18.995	Siriyara	20.26	18
18	DO-5	19.43	Siriyara	42.28	19
19	Dy-15	19.86	Siriyara	85.51	20
20	Dy-16	20.305	Siriyara	69.23	21
21	Dy-17	20.58	Yedtadi	83.92	22
22	Dy-18	21.592	Yedtadi	63.45	23
23	Dy-19	22.48	Yedtadi-22	67.59	24

24	DO-6	22.58	Shiriyara-21	33.80	25
25	Dy-20	23.24	Kavadi-18	65.62	26
26	DO-7	23.62	Shiriyara-21 & Yedtadi-22	35.10	27
27	Dy-21	24.26	Achladi-20	125.77	28
28	Dy-22	25.305	Achladi & Kavadi-18	112.92	29
29	Dy-23	25.955	Achladi-20	74.05	30
Brach Canal					
30	DO-1 & Dy-1	0.81	Heggunje & Shirooru	127.66	1
31	Dy-2	2.42	Heggunje	77.83	2
32	Dy-3	3.29	Heggunje	47.47	3
33	Dy-4	4.75	Heggunje, Kadur	74.48	4
34	Dy-5	5.55	Heggunje, Kadur	73.82	5
35	DO-2	6.08	Heggunje, Kadur	30.20	6
36	Dy-6	6.85	Yedtadi, Heggunje & Nadur	109.90	7
37	Dy-7	6.91	Heggunje & Nadur	77.16	8
38	Dy-8	8.175	Yedtadi & Nadur	129.24	9
39	Dy-9	8.72	Yedtadi & Nadur	54.12	10
Grand Total				**2723.04**	

ದಿನಾಂಕ 30 ನವೆಂಬರ್ 2018.

******